ಮಹಾವೀರ ಕಾಸರ, ಶಿವಮೊಗ್ಗ
ಮಹಿಳೆಗೂ, ಮಳೆಗೂ ಏನು ವ್ಯತ್ಯಾಸ?



ಮಳೆಯ ಮಿಂಚು ವರ್ಷಕಾಲಿಕ. ಮಹಿಳೆಯ ಮಿಂಚು ಸಾರ್ವಕಾಲಿಕ.

ಮಂಡಿ ಕುಮಾರ್, ಬೆಂಗಳೂರು
ಜಗಳ ಮುಗಿದ ಮೇಲೂ ಮಡದಿಯ ಗೊಣಗುವಿಕೆ ಮುಂದುವರಿಯುತ್ತದೆ. ಏಕೆ?
ಮಡದಿಯದು ಎಂಜಿನ್ ಆಫ್ ಆದ ಮೇಲೂ ಸ್ವಲ್ಪಕಾಲ ತಿರುಗುವ ರೇಡಿಯೇಟರ್ ಫ್ಯಾನ್ ಗುಣ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕನಸುಗಳು ಏಕೆ ಬೀಳುತ್ತವೆ?
ಏಳುವುದಕ್ಕೆ ಮುಂಚಿನ ಸ್ಥಿತಿ ಬೀಳುವುದೇ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಪ್ರೇಮ ಕುರುಡೋ, ಪ್ರೇಮಿಗಳೇ ಕುರುಡೋ?
ಪ್ರೇಮಿಗಳದೇ – ಜಾಣಕುರುಡು.

ಅಮರಯ್ಯಾ ಪತ್ರಿಮಠ, ಸುರಪುರ
ಬೀದಿನಾಯಿಗಳ ಕಚ್ಚಾಟಕ್ಕೂ, ದಂಪತಿಗಳ ಕಚ್ಚಾಟಕ್ಕೂ ವ್ಯತ್ಯಾಸವೇನು?



ಅದು ಶಬ್ದಮಾಲಿನ್ಯ; ಇದು ಮನಮಾಲಿನ್ಯ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಮನಸ್ಸಿಲ್ಲದೆ ಗುರಿ ಸಾಧಿಸಲು ಸಾಧ್ಯವೇ?
ವರ್ಕ್, ಲೋನ್ ಪ್ರೆಷರ್ ಇರುವ ಇಂದಿನವರು ಮನಸ್ಸಿಲ್ಲದೆಯೂ ಟಾರ್ಗೆಟ್ ಮುಟ್ಟುತ್ತಿರುವರಲ್ಲ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ನಿಮಗೆ ಏನು ಇಷ್ಟ? ಏನು ಕಷ್ಟ?
ಕಷ್ಟವಾಗುವುದೆಲ್ಲ ಇಷ್ಟ (ಉದಾ: ಸವಾಲುಗಳಿಗುತ್ತರ); ಇಷ್ಟವಾಗುವುದೆಲ್ಲ ಕಷ್ಟ (ಅತಿಖಾರ, ಅತಿಸಿಹಿ...)

ಅನಸೂಯ ಟಿ, ಕೇದಿಗೆಮನೆ
ಸತ್ಯದ ಮೇಲೆ ಸುಳ್ಳಿನ ಸಮಾಧಿ ಕಟ್ಟಿದರೂ ಸತ್ಯ ಹೊರಬರುತ್ತದಂತೆ, ಸತ್ಯವೆ?
ನಿಜ. ಇಂದಿನ ಸುಳ್ಳು ನಾಳಿನ ಟೊಳ್ಳಾಗಿ ಬಿರುಕು ಮೂಡುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ
ಮುಖ್ಯರಸ್ತೆಯಲ್ಲಿರುವ ಗುಂಡಿಗಳು ಗಂಡಾಗುಂಡಿ ಸರ್ಕಾರದ ಮುಖ್ಯ ಕುರುವು ಇರಬಹುದೆ?
'ಗಂಡಾಗುಂಡಿ' ಹಳತಾಯಿತು; ಈಗದು ಗೂಂಡಾ–ಗೂಂಡಿ.

ವಿ. ಹೇಮಂತಕುಮಾರ್, ಬೆಂಗಳೂರು
'ಯಾರಿಗೆ ಸಾಲುತ್ತೆ ನೀವು ತರುವ ಸಂಬಳ' ಅಂತಾಳಲ್ಲ?
'ಕೈ ಜೋಡಿಸು' ಎಂದು ಕೈಜೋಡಿಸಿ ಕೇಳಿ. 'ಕೈಚಾಚು'ವುದಕ್ಕಿಂತ ಕೈಜೋಡಿಸುವುದು ಲೇಸು.

ಬಿ. ಬಸವರಾಜ, ಹರಿಹರ
ಇತ್ತೀಚೆಗೆ ಕೆಲವು ದಂಪತಿ ಪರಸ್ಪರ 'ಬೇಬಿ, ಬೇಬಿ' ಎಂದು ಕರೆದುಕೊಳ್ಳುವುದೇಕೆ?
'ಏ ಎಳಸೇ' ಎಂದರೆ ಜಗಳ, 'ಬೇಬಿ' ಎಂದರೆ ಶಾಂತಿ ಎಂದು ತಿಳಿದಿದ್ದಾರಂತೆ.

ರಾಜಶೇಖರ ಹಾದಿಮನಿ, ಧಾರವಾಡ
ಬಂಧನ ಮತ್ತು ನಿಧನಕ್ಕೆ ವ್ಯತ್ಯಾಸವೇನು?
ಬಂಧನಕ್ಕೆ ತನ್ನ ತಪ್ಪೇ ಕಾರಣ; ನಿಧನಕ್ಕೆ ವೈದ್ಯರದೂ ಆದೀತು.

ಎಂ.ಸಿ. ಧನ್ಯತಾ, ಬೆಂಗಳೂರು
ರಾಮರಾಜ್ಯ ಎಂದರೇನು?
ರಾಜನಿಲ್ಲದಿದ್ದರೂ, ಪಾದುಕೆಗೂ ಭಕ್ತಿ, ನಿಷ್ಠೆಯಿಂದ ನಡೆದುಕೊಳ್ಳುವ ಪ್ರಜೆಗಳಿದ್ದ ರಾಜ್ಯ ಎಂದು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಪಾಪಿಗಳು ಯಮಲೋಕಕ್ಕೆ ಬಂದಾಗ ಯಮನು ಆಧಾರ್ ಕಾರ್ಡ್ ಕೇಳಿದರೆ?
'ದೇಹಕ್ಕೆ ಆಧಾರ್ ಇತ್ತು. ಅಲ್ಲೇ ಬಿಟ್ಟಿದ್ದೇನೆ. ಆತ್ಮಕ್ಕೆ ಐಡಿ ಇಲ್ಲ' ಎನ್ನಿ.

## ಬಹುಮಾನಿತ ಪ್ರಶ್ನೆ

ಬಿ.ಆರ್. ಉಷಾ, ಕೆನಡಾ
ತಬ್ಬಲಿಯಾಗಿ ಆಶ್ರಮದಲ್ಲಿರುವ ಮಕ್ಕಳಿಗೂ, ಮಕ್ಕಳಿದ್ದೂ ಆಶ್ರಮದಲ್ಲಿರುವ ವೃದ್ಧರಿಗೂ ವ್ಯತ್ಯಾಸ?
ಗತಕ್ಕೆ ಇಂದನ್ನು ಹೋಲಿಸಿ ಮಕ್ಕಳು ಕುಣಿಯುತ್ತಾರೆ; ವೃದ್ಧರು ಕುಸಿಯುತ್ತಾರೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಪರರ ವಸ್ತು ಪಾಷಾಣವಂತೆ. ನಿಜವೇ ಸಾರ್?
'ಅದು ನಮ್ಮೊಡನಿದ್ದಾಗ ರೈಡ್ ಆದರೆ ಮಾತ್ರ' ಎಂದನಾ ಲೂಟಿಗ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದೇಹಕ್ಕೆ ಬ್ಲಡ್ ಕೊಡುವುದು ತಾಯಿ. ಆಲೋಚನೆ ಕೊಡುವುದು ತಂದೆ. ಗುರುಗಳು?
ಆ ಆಲೋಚನೆಗಳು 'ಬ್ಲಡಿ ನಾನ್‌ಸೆನ್ಸ್' ಆಗದಂತೆ ಬೋಧಿಸುವುದು.

ಶಿವಕುಮಾರ್ ರಾಮಗುಂಡಿ, ಬೈಲಹೊಂಗಲ
ನಗುವು ಎಲ್ಲಾ ಔಷಧಿಗಳಿಗೆ ಔಷಧ ಎನ್ನುತ್ತಾರೆ. ಅದು ಸಿಗುವುದೆಲ್ಲಿ?



ಇದೇ ಅಂಕಣದಲ್ಲಿ, ಇದರ ಎದುರಿನ ಪುಟದಲ್ಲಿ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಮುಂದಿನ ಪೀಳಿಗೆಯವರು ಈಗಿನ ಇತಿಹಾಸವನ್ನು ಏನೆಂದು ಓದುತ್ತಾರೆ?
'ಸ್ಮಾರ್ಟ್ ವಸ್ತುಗಳಿಂದ ಮೊದ್ದಾದವರ ಕಾಲ' ಎಂದು.

ಅನಂತ, ಬೆಂಗಳೂರು
ರಾಜಕಾರಣಿಗಳ ಕಚ್ಚೆ ಭದ್ರವಾಗಿ ನಿಲ್ಲಲು ಯಾವ ಗಂಟು ಹಾಕಬೇಕು ರಾಂ?
'ಎಚ್ಚರಿಕೆ. ಮುಂದೆ ಹನಿಟ್ರ್ಯಾಪ್ ಇದೆ' ಎಂಬ ಹೆಗ್ಗಂಟು.

■ ರಾಮ್